

# ಚಂದ್ರಮುಕುಟದ ಚೆಲುವು..

■ ಚಿತ್ರ-ಲೇಖನ: ಪುಟ್ಟರಾಜು, ಕೈಗಾ

ಮಾರ್ಚ್ ತಿಂಗಳ ಸುಡು ಬಿಸಿಲಿನಲ್ಲಿ ಕೈಗಾ ಬರ್ಡ್ ಮ್ಯಾರಾಥಾನ್‌ಗೆಂದು ಬಂದಿದ್ದ ಶಿರಸಿಯ ಫಾರೆಸ್ಟ್ ಕಾಲೇಜಿನ ಹುಡುಗರೊಂದಿಗೆ ಪಕ್ಷಿ ವೀಕ್ಷಣೆ ಮುಗಿಸಿಕೊಂಡು ಬರುತ್ತಿರಬೇಕಾದರೆ, ಪಕ್ಕದಲ್ಲೇ ಖಾಲಿಯಾಗಿ ನಿಂತಿದ್ದ ಗದ್ದೆ, ಗದ್ದೆಯ ಬದುವಿಗೆ ತಾಗಿಕೊಂಡಿದ್ದ ಮರದಿಂದ ಒಂದು ವಿಚಿತ್ರ ಹಕ್ಕಿ ಹಾರಿದಂತಾಯಿತು. ಎಲ್ಲರೂ ತಟ್ಟನೆ ನಿಂತರು. ಮರದಿಂದ ಹಾರಿ ನೆಲದ ಮೇಲೆ ಕುಂತ ಆ ಪಕ್ಷಿ ನೆಲಕುಟುಕ! ನಾನು ಕ್ಯಾಮೆರಾ ಹೊರ ತೆಗೆದದ್ದೇ ತಡ ಎಲ್ಲರ ಮುಖ ಬಾಡತೊಡಗಿತು. ಕಾರಣವಿಷ್ಟೆ– ಮುಂಜಾನೆ 6ರಿಂದ ಪಕ್ಷಿ ವೀಕ್ಷಣೆ ಮಾಡಿ ಸುಸ್ತಾಗಿದ್ದ ಜೀವಕ್ಕೆ, ನಾನು ಫೋಟೊ ತೆಗೀತಾ ಕುಂತರೆ ಹೊಟ್ಟೆಗೆ ತಣ್ಣೀರ ಬಟ್ಟೆಯೇ ಗತಿ ಎನ್ನುವ ಆತಂಕ. ಎಲ್ಲರ ಒತ್ತಾಯಕ್ಕೆ ಮಣಿದು ಒಂದು ಕ್ಷಣ ಹಕ್ಕಿಯನ್ನು ಕಣ್ತುಂಬ ನೋಡಿ ಊಟಕ್ಕಾಗಿ ಅತಿಥಿಗೃಹದತ್ತ ಹೆಜ್ಜೆ ಹಾಕಿದೆ.

ಮರುದಿನ ಬೆಳಿಗ್ಗೆ ಕಂಪೆನಿ ಬಸ್ಸಿನಲ್ಲಿ ಆಫೀಸಿಗೆ ಹೊರಟಾಗ ಕುಮಟಾದ ಮಿತ್ರ ನೆಲ್ಲಿಕೇರಿ, "ನಾನು ಕಳೆದ ವಾರವಷ್ಟೇ ವಸತಿ ಸಂಕೀರ್ಣದ ಮುಖ್ಯ ದ್ವಾರದ ಬಳಿಯ ಮರದ ಮೇಲೆ ದೊಡ್ಡದಾದ ಪೇಟಾ ಹೊದ್ದಂತಹ, ಕಪ್ಪು ಬಿಳಿ ಪಟ್ಟಿ ಹೊಂದಿದ ಹಕ್ಕಿಯನ್ನು ನೋಡಿದೆ" ಎಂದು ಮಾತು ಶುರು ಮಾಡಿದ. ಅವನು ಅಷ್ಟು ಹೇಳಿದ್ದೇ ತಡ; ಹಿಂದಿನ ದಿನ ಸಿಕ್ಕ ಹಕ್ಕಿಯ ಫೋಟೊ ತೆಗೆಯದ ಮನಸ್ಸಿನ ಕೊರಗು ಮತ್ತಷ್ಟು ಬಲವಾಯಿತು. ನಡುವೆಯೇ ಬಸ್‌ನಿಂದ ಇಳಿದು, ಸೀದಾ ವಸತಿ ಸಂಕೀರ್ಣದ ಗೇಟಿನಿಂದ 2–3 ಕಿ.ಮೀ. ದೂರದ ಇರ್ಪಾನೆ ಗ್ರಾಮದ ಕಡೆ ಹೆಜ್ಜೆ ಹಾಕಿದೆ. ಈ ಗ್ರಾಮದ ಶಾಲೆಯ ಗದ್ದೆ ಬಯಲಿನ ಮರದ ಸಮೀಪ ಬರುತ್ತಿದ್ದಂತೆಯೇ, ಹಿಂದಿನ ದಿನ ಕಂಡಿದ್ದ ವಿಚಿತ್ರ ಹಕ್ಕಿ ಕಣ್ಣಿಗೆ ಬಿತ್ತು.

ಆ ಹಕ್ಕಿ ಗದ್ದೆ ಬಯಲಿನ ಹುಲ್ಲಿನಲ್ಲಿ ನೆಲವನ್ನು ಕುಟ್ಟುತ್ತಾ... ಕುಟುಕುತ್ತಾ ಓಡಾಡುತ್ತಿತ್ತು. ಹತ್ತಿರದಲ್ಲೇ ಇದ್ದ ಕರಿಮತ್ತಿಯ ಮರದ ಹಿಂದೆ ಅವಿತು, ಕ್ಯಾಮೆರಾ ಹೊರತೆಗೆದು ಚಿತ್ರೀಕರಿಸತೊಡಗಿದೆ. ಆ ಹಕ್ಕಿ ಹುಲ್ಲಿನಲ್ಲಿ ನಡೆದಾಡುತ್ತಾ, ಆಗಾಗ ನಿಂತು ನೆಲವನ್ನು ತುಂಬ ಹೊತ್ತು ಕೊಕ್ಕಿನಿಂದ ಕುಟ್ಟುತ್ತಿತ್ತು. ಕೆಲವೊಮ್ಮೆ ಹತ್ತಿರ ಮರದ ಬಳಿ ಹೋಗಿ ಕಾಂಡದ ಸುತ್ತ ಮುತ್ತ ಕುಟ್ಟುತ್ತಿತ್ತು. ಅದೇಕೆ ಹಾಗೆ ಕೊಕ್ಕನ್ನು ಕುಟ್ಟುತ್ತದೆ ಎಂದು ಎಷ್ಟು ಗಮನಿಸಿದರೂ ಬರಿ ಕಣ್ಣಿಗೆ ಏನೂ ಗೋಚರಿಸಲಿಲ್ಲ.

ಕುತೂಹಲದಿಂದ ಕ್ಯಾಮೆರಾದಲ್ಲಿ ಸೆರೆ ಹಿಡಿದ ಫೋಟೊವನ್ನು ಒಂದೊಂದಾಗಿ ಜೂಮ್ ಮಾಡುತ್ತಾ ಗಮನಿಸಿದಾಗ, ಪಿಕಾಸಿಯನ್ನು ನೆಲಕ್ಕೆ ಕೆತ್ತಿದಂತೆ ಪ್ರತಿ ಬಾರಿ ಕೊಕ್ಕನ್ನು ಕುಕ್ಕಿ